ಅಧ್ಯಕ್ಷರು :– ಯಾವಾಗ ? ಬೇಡ ಬೇಡ.

ಶ್ರೀ ವೈ.ಎಸ್.ವಿ. ದತ್ತಾ :– ಅಲ್ಲಿ ಭೂಮಾಪಕರುಗಳು strike ಕುಳಿತಿದ್ದಾರೆ.

ಅಧ್ಯಕ್ಷರು :– ಬೇಡ, ಬೇಡ. ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡರವರೆ, ತಾವು ಕೇಳಿ.

7. **ವಿಷಯ :** ವೈದ್ಯಾಧಿಕಾರಿಗಳ ವಸತಿ ಗೃಹಗಳ ಕೆಲಸವನ್ನು ಪೂರ್ಣಗೊಳಿಸುವ ಬಗ್ಗೆ.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) :– ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮುಖಾಂತರ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ. ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿರುವ ವೈದ್ಯಾಧಿಕಾರಿಗಳ ವಸತಿ ಗೃಹಗಳ ಕೆಲಸವು ಅರ್ಧಕ್ಕೆ ನಿಂತಿದೆ. ಅದನ್ನು ದಯಮಾಡಿ ಪೂರ್ಣಗೊಳಿಸಬೇಕು. ಏಕೆಂದರೆ ಅರಕೆರೆ ಗ್ರಾಮದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಇದೆ. ಸುಮಾರು 10,000 ಜನಸಂಖ್ಯೆಯು ವಾಸ ಮಾಡುತ್ತಿದ್ದಾರೆ.

ಅಧ್ಯಕ್ಷರು :– ಅದು ಬೇಡ, ವಸತಿ ಗೃಹಗಳ ಕೆಲಸವನ್ನು ಪೂರ್ಣಗೊಳಿಸುವುದು.

ಶ್ರೀ ಎ. ಬಿ. ರಮೇಶ್ ಬಂಡಿಸಿದ್ದೇಗೌಡ :– ದಯಮಾಡಿ ಏಕೆಂದರೆ ಡಾಕ್ಟರ್‌ಗಳಿಗೆ quartersಗಳು ಇರುವುದಿಲ್ಲ. ಎರಡು quartersಗಳು ಶಿಥಿಲಗೊಂಡು ಬಿದ್ದುಹೋಗಿದೆ. ಅದನ್ನು ಅರ್ಧ ರಿಪೇರಿ ಮಾಡಿಸಿದ್ದೇವೆ. ಕಳೆದ ಸಾರಿ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರ ಕೃಪಾಕಟಾಕ್ಷದಿಂದ ಆಗ ಅರ್ಧ ಕೆಲಸವನ್ನು ಮಾಡಿಸಿದ್ದೇವೆ. ಇದನ್ನು ತಾವು ಪೂರ್ಣಗೊಳಿಸಬೇಕು. ನಮ್ಮ ಊರಿನಲ್ಲಿ ಡಾಕ್ಟರ್‌ಗಳು ಇರುವ ಹಾಗೆ ಮಾಡಬೇಕು. ಅಲ್ಲಿ 10,000 ಜನಸಂಖ್ಯೆ ಇದೆ. ಅಲ್ಲಿ ಯಾರೂ ಸಹ ಡಾಕ್ಟರ್‌ಗಳು ಇರುವುದಿಲ್ಲ.

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಶಾಸಕರ ಮನವಿಯನ್ನು ಪರಿಶೀಲಿಸಿ ಆದಷ್ಟು ಬೇಗನೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು :– ಆಯಿತು, ಈಗ ನಿಯಮ 69ರ ಮೇರೆಗೆ ಚರ್ಚೆ. ಶ್ರೀಮಾನ್ ಹೆಚ್.ಡಿ. ಕುಮಾರಸ್ವಾಮಿಯವರು, ಶ್ರೀ ಕೆ.ಎಂ. ಶಿವಲಿಂಗೇಗೌಡ, ಶ್ರೀಮಾನ್ ಎಸ್. ಚಿಕ್ಕಮಾದು, ಶ್ರೀ ಸಿ.ಎನ್. ಬಾಲಕೃಷ್ಣ, ಶ್ರೀ ಸಾ.ರಾ. ಮಹೇಶ್ ಹಾಗೂ ಇತರರು ಮದ್ಯ ಮಾರಾಟದ ಬಗ್ಗೆ ಪ್ರಸ್ತಾಪ ಮಾಡಿ.